ಕ.ರಾ.ಪ್ರ.ಅ. ನಿಗಮದವರು ನೀಡಿರುವ ಗೌರವ ಅಪ್ಪಣೆ ಚೀಟಿ

389 (823): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):-

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ವಿವಿಧ ವ್ಯವಸ್ಥಿತ ಪ್ರವಾಸಿಗಳಿಗೆ ಗೌರವ ಅಪ್ಪಣೆ ಚೀಟಿ (ಕಾಂಪ್ಲಿಮೆಂಟರಿ ಪಾಸ್)ಗಳನ್ನು ನೀಡುತ್ತಿರುವುದು ವಾಸ್ತವವೆ;

ಆ. ಹಾಗಿದ್ದಲ್ಲಿ ಜನವರಿ 92ರಿಂದ ಡಿಸೆಂಬರ್ 92ರ ಅಂತ್ಯದವರೆಗೆ ಎಷ್ಟು ಗೌರವ ಅಪ್ಪಣೆ ಚೀಟಿ (ಪಾಸ್)ಗಳನ್ನು ನೀಡಲಾಗಿದೆ;

ಇ. ಯಾವ ಸ್ಥಳಗಳಿಗೆ ಈ ಅಪ್ಪಣೆ ಚೀಟಿಗಳನ್ನು ನೀಡಲಾಗಿದೆ;

ಈ. ಯಾರಿಗೆ ಗೌರವ ಅಪ್ಪಣೆ ಚೀಟಿ (ಪಾಸ್)ಗಳನ್ನು ನೀಡಲಾಗಿದೆ ಅವರ ಹೆಸರು ಮತ್ತು ವಿಳಾಸ;

ಉ. ಮೇಲಿನ ಅವಧಿಯಲ್ಲಿ ನೀಡಿದ ಗೌರವ ಅಪ್ಪಣೆ ಚೀಟಿಗಳ ಒಟ್ಟು ಮೊತ್ತವೆಷ್ಟು;

ಊ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಡೆಸುತ್ತಿರುವ ನಿಯೋಜಿತ ಪ್ರವಾಸಗಳಿಗೆ ಗೌರವ ಅಪ್ಪಣೆ ಚೀಟಿ (ಪಾಸ್) ಗಳನ್ನು ನೀಡುತ್ತಿರುವ ಪದ್ಧತಿಯನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):-

ಅ. ಹೌದು.

ಆ. 50

ಇ. ಹೆಚ್ಚಾಗಿ ತಿರುಪತಿ, ಮೈಸೂರು, ಬೇಲೂರು-ಹಳೇಬೀಡು.

ಈ. ವಿವರ ನಿರ್ವಹಿಸಿಲ್ಲ.

ಉ. ಸುಮಾರು ರೂ.10,000-00.

ಊ. ಇಲ್ಲ.

ರಾಜ್ಯದ ಖಜಾನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

390 (1108): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):-

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ ರಾಜ್ಯದ ಖಜಾನೆ ಇಲಾಖೆಯಲ್ಲಿ ನೌಕರರ ಸಂಖ್ಯೆಯು ಕೊರತೆಯಿರುವುದರಿಂದ, ಸಾರ್ವಜನಿಕರಿಗೆ ಸಮರ್ಪಕ ಸೇವೆಯು ದೊರೆಯುತ್ತಿಲ್ಲವೆಂಬ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ. ಖಜಾನೆಗಳಲ್ಲಿ ಬಿಲ್ ಪಾಸ್ ಮಾಡುವಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಇ. ಜಿಲ್ಲಾ ಮಟ್ಟದಲ್ಲಿ ಖಜಾನೆಗಳ ವಿಭಾಗಗಳನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ಖಜಾನೆ ಇಲಾಖೆಯಲ್ಲಿ ಕೆಲವು ಹುದ್ದೆಗಳು ಖಾಲಿ ಇದ್ದರೂ, ಸಾರ್ವಜನಿಕರಿಗೆ ಯಾವ ತೊಂದರೆಯೂ ಇಲ್ಲದೆ ಕೆಲಸವು ನಡೆಯುತ್ತಿದೆ.

ಆ. ಮೇಲೆ ತಿಳಿಸಿದಂತೆ ಬಿಲ್ ಪಾಸ್ ಮಾಡುವಲ್ಲಿ ಉಪಖಜಾನೆ, ಜಿಲ್ಲಾ ಖಜಾನೆಗಳಲ್ಲಿ ಯಾವ ವಿಳಂಬವಾಗುತ್ತಿರುವುದಿಲ್ಲ.

ಇ. ಸಾರ್ವಜನಿಕರು, ಶಾಸಕರು ಮತ್ತು ಮುಂತಾದ ಪ್ರಮುಖ್ಯ ವ್ಯಕ್ತಿಗಳಿಂದ ಹೊಸ ಖಜಾನೆಯನ್ನು ತೆರೆಯುವ ಬಗ್ಗೆ ಪ್ರಸ್ತಾವನೆಯು ಬಂದ ತಕ್ಷಣ ಅದನ್ನು ಪರಿಶೀಲಿಸಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕೆಳಗಿರುವ ಸ್ಥಳಗಳಲ್ಲಿ ಹೊಸ ಉಪಖಜಾನೆಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಗುತ್ತಿದೆ.

ಉಪಗ್ರಹಗಳ ವೈಜ್ಞಾನಿಕ ಬಳಕೆ

396 (1817): ಶ್ರೀ ಬಸವರಾಜು (ಬ್ರಹ್ಮಾವರ):–

ಮಾನ್ಯ ಪರಿಸರ ಮತ್ತು ಜೀವಿ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯದಲ್ಲಿ ಉಪಗ್ರಹಗಳ ವೈಜ್ಞಾನಿಕ ಬಳಕೆಯನ್ನು ಯಾವ ಇಲಾಖೆಗಳು ಬಳಸುತ್ತಿವೆ;

2. ಕೃಷಿ, ಮೀನುಗಾರಿಕೆ ಮುಂತಾದ ವಲಯಗಳಲ್ಲಿ ಉಪಗ್ರಹ ತಂತ್ರಜ್ಞಾನವನ್ನು ವಿಪುಲವಾಗಿ ಬಳಕೆ ಮಾಡಿಕೊಂಡು, ತನ್ಮೂಲಕ ಆ ವಲಯಗಳಲ್ಲಿ ಹೇರಳ ಉಪಯುಕ್ತತೆಯನ್ನು ಪಡೆದುಕೊಳ್ಳುವುದರ ಬಗ್ಗೆ ಸರ್ಕಾರವು ಸೂಕ್ತ ಕ್ರಮವನ್ನು ಕೈಗೊಂಡಿದೆಯೆ;

3. ಕೃಷಿ ಮತ್ತು ಮೀನುಗಾರಿಕೆ ವಲಯಕ್ಕೆ ಸಂಬಂಧಪಟ್ಟ ಹಾಗೆ ಯಾವ ರೀತಿಯಲ್ಲಿ ಈ ತನಕ ಉಪಗ್ರಹ ತಂತ್ರಜ್ಞಾನವನ್ನು ರಾಜ್ಯದಲ್ಲಿ ಬಳಸಿಕೊಳ್ಳಲಾಗಿದೆ. ಬಳಸಿಕೊಂಡಿದ್ದಲ್ಲಿ ಅದರ ಪೂರ್ಣ ವಿವರಗಳನ್ನು ನೀಡುವುದು ?

ಶ್ರೀ ಎನ್.ಜಿ. ಹಾಲಪ್ಪ (ವಿಜ್ಞಾನ ಮತ್ತು ಯಂತ್ರ ಕಲಾ ಇಲಾಖೆಯ ರಾಜ್ಯ ಮಂತ್ರಿಗಳು):–

1. ಕರ್ನಾಟಕ ದೂರ ಸಂವೇದಿ ತಂತ್ರಜ್ಞಾನ ಬಳಕೆ ಕೇಂದ್ರ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಕೃಷಿ ಇಲಾಖೆ ಹಾಗೂ ಅರಣ್ಯ ಇಲಾಖೆಗಳು ಉಪಗ್ರಹ ಆಧಾರಿತ ದೂರ ಸಂವೇದಿ ತಂತ್ರಜ್ಞಾನವನ್ನು ಬಳಸುತ್ತಿವೆ.

2. ಈ ಕೆಳಗೆ ನಮೂದಿಸಿರುವ ಯೋಜನೆಗಳು ಪ್ರಸ್ತುತ ಪ್ರಗತಿಯಲ್ಲಿದ್ದು, ಕೃಷಿ, ಮೀನುಗಾರಿಕೆ ಮುಂತಾದ ವಲಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿದೆ.

1. ಶಾಶ್ವತ ಅಭಿವೃದ್ಧಿಗಾಗಿ ಸಮಗ್ರ ಅಧ್ಯಯನ.
2. ಪಾಳು ನೆಲ ನಕ್ಷೆ ತಯಾರಿಕೆ.